ಓ. ಎಸ್. ನಂಃ 81/2017

ಪಿ . ಡಬ್ಲ್ಯೂಃ 4

ದಿಃ18-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಸಿ ಬಿ ಪಿ ಪ್ರತಿವಾದಿ ಪರ ವಕೀಲರಿಂದ ಃ

ನನಗೆ ನ್ಯಾಯಾಲಯದಿಂದ ದಿ 15-12-2025 ರಂದು ನೋಟಿಸ ಜಾರಿ ಆಗಿದೆ . 2014-15 ರಿಂದ 2017-18 ರವರೆಗೆ ಕ್ಯಾಲಕೊಂಡ ಪಿ ಡಿ ಒ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದೆ . ಆಸ್ತಿ ನಂಬರ 60/2 ರಲ್ಲಿ ಬಸವ ವಸತಿ ಯೋಜನೆ ಅಡಿಯಲ್ಲಿ ಮನೆ ಮಂಜೂರಾತಿ ಆಗಿದ್ದು ಆ ಮನೆಯನ್ನು ರಸ್ತೆ ಮೇಲೆ ಕಟ್ಟುತಿದ್ದು ಅದನ್ನು ನಾನು ಜಿ ಪಿ ಎಸ್ ಮಾಡಿದ್ದೇನೆ ಎಂದು ದಾಖಲಾಗಿದೆ . ವಾದಿ ಅವರು ಪ್ರತಿವಾದಿ ವಿರುದ್ದ ದಾವೆ ಮಾಡಿದ್ದಾರೆ . ಕ್ಯಾಲಕೊಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಪಾಣಿಗಟ್ಟಿ ಬರುತ್ತದೆ ಎಂದರೆ ಸರಿ . ಪಾಣಿಗಟ್ಟಿಯಲ್ಲಿ ಯಾವ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಮಾಹಿತಿ ಇದೆ . ದಾವಾ ಆಸ್ತಿ ನಂಬರ 60/2 ಇರುತ್ತದೆ . ಆಸ್ತಿ ನಂಬರ 60 ಮೂಲತಹ ಬಸವಂತಪ್ಪ ಬಸಪ್ಪ ತಳವಾರ ಮತ್ತು ಕನಕಪ್ಪ ಬಸಪ್ಪ ತಳವಾರ ಅವರ ಹೆಸರಿನಲ್ಲಿ ಜಂಟಿ ಆಗಿ ಇತ್ತು . ಪಂಚಾಯಿತಿ ದಾಖಲೆಗಳ ಜರಾಕ್ಸ ಪ್ರತಿ ತಂದಿದ್ದೇನೆ . ತಿಪ್ಪಣ್ಣ ಅವರು ಹೆಂಡತಿ ಹೆಸರಿಗೆ ಯಾವಾಗ ಆಸ್ತಿಯನ್ನು ಬಿಟ್ಟು ಕೊಟ್ಟರು ಎಂದರೆ 15-03- 2012 ರಂದು ಬಿಟ್ಟು ಕೊಟ್ಟಿದ್ದಾರೆ ಆವಾಗ ನಾನು ಕಾರ್ಯ ನಿರ್ವಹಿಸಿಲ್ಲ ಅದರ ಠರಾವು ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ . ನನ್ನ ಸಾಕ್ಷಿಯಲ್ಲಿ ಎಷ್ಟು ಬಾಗ , ಅಳತೆ , ಯಾವ ಬಾಗದಲ್ಲಿ ಬಿಟ್ಟು ಕೊಟ್ಟಿದ್ದಾರೆ ಎಂದು ಹೇಳಿಲ್ಲ ಎಂದರೆ ಸರಿ . ದಾವಾ ಆಸ್ತಿಗೆ ಸಂಬಂದಪಟ್ಟಂತೆ ಚಕುಬಂದಿ ಹೇಳಿಲ್ಲ ಎಂದರೆ ಸರಿ . ನಿಪಿ-1 ಮತ್ತು 3/ ಮನೆ ಮಂಜುರಾತಿ ಮತ್ತು ಕಾಮಗಾರಿ ಆದೇಶ ಪತ್ರ , ಜಿ ಪಿ ಎಸ್ ನಲ್ಲಿ ಯಾವ ಆಸ್ತಿ ಹಾಗೂ ಎಷ್ಟು ಅಳತೆ , ಯಾವ ಬಾಗದಲ್ಲಿ ಕಟ್ಟುತಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಆನಲೈನ ಪ್ರತಿಯಲ್ಲಿ ನಮೂದು ಇರುವುದಿಲ್ಲ ಎಂದು ನುಡಿದರು . ಜಿ ಪಿ ಎಸ್ ನಲ್ಲಿ ಸರ್ವೆ ನಂಬರ ಬರುವುದಿಲ್ಲ . ಕಾಮಗಾರಿ ಆದೇಶ ಮಾಡುವ ಮೊದಲು ನಾನು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ . 60/2 ರ ಕಾಮಗಾರಿ ಆದೇಶವನ್ನು ನಾನು ವಾದಿಯವರ ಜೊತೆ ಮಿಲಾಪಿಯಾಗಿ

ಮಾಡಿದ್ದೇನೆ ಎಂದರೆ ಸರಿಯಲ್ಲ . ಆಸ್ತಿ ನಂಬರ 60 ಮತ್ತು 66 ರ ನಡುವೆ ಸುಮಾರು ಆಸ್ತಿಗಳು ಇದ್ದು ಬಹಳ ಅಂತರ ಇದೆ ಎಂದರೆ ಸಾಕ್ಷಿಯು ರಸ್ತೆ ಇದ್ದು ಅಕ್ಕ ಪಕ್ಕ ಮನೆಗಳಿದೆ ಎಂದು ನುಡಿದರು . ರಸ್ತೆಯಲ್ಲಿ ಪ್ರತಿವಾದಿಯವರಿಗೆ ಅಡ್ಡಾಡಲು ದಾರಿ ಇದ್ದು ಅದರ ಮೇಲೆ ವಾದಿಯವರು ಮನೆ ಕಟ್ಟುತ್ತಿದ್ದು ಅದಕ್ಕೆ ನಾನು ಆದೇಶ ನಿಡಿದ್ದೇನೆ ಎಂದರೆ ಸರಿಯಲ್ಲ . ಕೇವಲ ಉತಾರವನ್ನು ನೋಡಿ ಸ್ಥಾನಿಕ ಪರಿಶೀಲನೆ ಮಾಡದೇ ಆದೇಶ ಮಾಡಿದ್ದೇನೆ ಎಂದರೆ ಸರಿಯಲ್ಲ . ವಾದಿಯವರ ಕಬ್ಜೆ ಬಗ್ಗೆ ನನ್ನ ಸಾಕ್ಷಿಯಲ್ಲಿ ಹೇಳಿಲ್ಲ ಎಂದರೆ ಸರಿ. ವಾದಿಯವರಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.